ದಿಃ 20.06.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಎಂ.ಎಂ.ಆರ್., ವಕೀಲರಿಂದ ವಾದಿ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ದಿಃ 28.10.1959 ರ ಕ್ರಯದ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ದಿಃ 30.03.1972 ರ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ದಿಃ 13.07.1964 ರ ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 290/3 ರ ಕೈ ಬರಹದ 2 ಪಹಣಿ ಪತ್ರಗಳನ್ನು ಹಾಜರು ಮಾಡಿದ್ದು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 302 ರ ಕೈ ಬರಹದ 2 ಪಹಣಿ ಪತ್ರಗಳನ್ನು ಹಾಜರು ಮಾಡಿದ್ದು ನಿ.ಪಿ.6 ಮತ್ತು 7 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 293/3 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 302 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 303 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.10 ಎಂದು ಗುರುತಿಸಲಾಯಿತು, ಆಕಾರ್ ಬಂದ್ ನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು ಗುರುತಿಸಲಾಯಿತು, ನಕ್ಷೆಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು, ಸರ್ವೆ ಇಲಾಖೆಯಿಂದ ನೀಡಿರುವ ನೋಟೀಸಿನ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.13 ಮತ್ತು 14 ಎಂದು ಗುರುತಿಸಲಾಯಿತು, ಭೂ ಮಾಪಕರ ಮಹಜರ್ ನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.15 ಎಂದು ಗುರುತಿಸಲಾಯಿತು, ಹದ್ದು ಬಸ್ತು ನಕ್ಷೆಯ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.16

ಎಂದು ಗುರುತಿಸಲಾಯಿತು, ಹೇಳಿಕೆಯನ್ನು ಹಾಜರು ಮಾಡಿದ್ದು ನಿ.ಪಿ.17 ಎಂದು ಗುರುತಿಸಲಾಯಿತು, ಹದ್ದು ಬಸ್ತು ಸ್ಕೆಚ್ ನ್ನು ಹಾಜರು ಮಾಡಿದ್ದು ನಿ.ಪಿ.18 ಎಂದು ಗುರುತಿಸಲಾಯಿತು, ಮೂಡಿಗೆರೆ ತಹಶೀಲ್ದಾರ್ ರವರು ನೀಡಿರುವ ಹಿಂಬರಹವನ್ನು ಹಾಜರು ಮಾಡಿದ್ದು ನಿ.ಪಿ.19 ಎಂದು ಗುರುತಿಸಲಾಯಿತು, ಪ್ರಥವು ವರ್ತಮಾನ ವರದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.20 ಎಂದು ಗುರುತಿಸಲಾಯಿತು, ದೂರಿನ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.21 ಎಂದು ಗುರುತಿಸಲಾಯಿತು, ಸ್ವತ್ತಿನ ಪಟ್ಟಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.22 ಎಂದು ಗುರುತಿಸಲಾಯಿತು, 2 ಛಾಯಚಿತ್ರಗಳನ್ನು ಹಾಜರು ಮಾಡಿದ್ದು ನಿ.ಪಿ.23 ಮತ್ತು 24 ಎಂದು ಗುರುತಿಸಲಾಯಿತು, ಸಿ.ಡಿ ಯನ್ನು ಹಾಜರು ಮಾಡಿದ್ದು ನಿ.ಪಿ.25 ಎಂದು ಗುರುತಿಸಲಾಯಿತು.

3. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ದಿಃ 04.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ**

4. ಉಳಿದ ವಾದಿಗಳು ನನಗೆ ನೀಡಿರುವ ಅಧಿಕಾರ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.26 ಎಂದು ಗುರುತಿಸಲಾಯಿತು, O.S.No.195/2017 ರ ವಾದ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.27 ಎಂದು ಗುರುತಿಸಲಾಯಿತು, O.S.No.195/2017 ರಲ್ಲಿ ಸಲ್ಲಿಸಿರುವ ಪ್ರತಿಬಂದಕಾಜ್ಞೆಯ ಕೋರಿ ಸಲ್ಲಿಸಿರುವ ಮಧ್ಯಂತರ ಅರ್ಜಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.28 ಎಂದು ಗುರುತಿಸಲಾಯಿತು, O.S.No.195/2017 ರಲ್ಲಿ ನ್ಯಾಯಾಲಯದಲ್ಲಿ ಆಯುಕ್ತಕರ ನೇಮಕ್ಕಾಗಿ ಸಲ್ಲಿಸಿರುವ ಅರ್ಜಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.29 ಎಂದು ಗುರುತಿಸಲಾಯಿತು, ಕಮಿಷನ್ ವರದಿಯ ಸರ್ವೆ ಸ್ಕೆಚ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.30 ಎಂದು ಗುರುತಿಸಲಾಯಿತು, O.S.No.195/2017 ರಲ್ಲಿ ವಾದಿ ಪರ ವಕೀಲರ ಪ್ರಶ್ನಾವಳಿಗೆ ನ್ಯಾಯಾಲಯದ ಆಯುಕ್ತರು ನೀಡಿರುವ ಉತ್ತರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.31 ಎಂದು ಗುರುತಿಸಲಾಯಿತು, ಪ್ರತಿವಾದಿ ಪರ ಸದರಿ ಪ್ರಕರಣದಲ್ಲಿ ಸಲ್ಲಿಸಿರುವ ಪ್ರಶ್ನಾವಳಿಗೆ ನ್ಯಾಯಾಲಯದ ಆಯುಕ್ತರು ನೀಡಿರುವ ಉತ್ತರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.32 ಎಂದು ಗುರುತಿಸಲಾಯಿತು, ನ್ಯಾಯಾಲಯದ ಆಯುಕ್ತರು ಸ್ಥಳದಲ್ಲಿ ಮಾಡಿದ ಮಹಜರ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.33 ಎಂದು ಗುರುತಿಸಲಾಯಿತು, ನ್ಯಾಯಾಲಯದ ಆಯುಕ್ತರ ವರದಿಗೆ ಸದರಿ ದಾವೆಯ ವಾದಿ ಸಲ್ಲಿಸಿರುವ ತಕರಾರಿನ ದೃಢೀಕೃತ ನಕಲನ್ನು ಹಾಜರು

ಮಾಡಿದ್ದು ನಿ.ಪಿ.34 ಎಂದು ಗುರುತಿಸಲಾಯಿತು, ಸದರಿ ದಾವೆಯಲ್ಲಿ 6 ಮತ್ತು 7 ನೇ ಪ್ರತಿವಾದಿಗಳು ಸಲ್ಲಿಸಿರುವ ತಕರಾರಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.35 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ ಪ್ರತಿವಾದಿ ಪರವಾಗಿ**

5. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು,ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 09.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ ಪ್ರತಿವಾದಿ ಪರವಾಗಿ**

6. 4 ನೇ ವಾದಿಯು ನನ್ನ ತಂಗಿಯಾಗಿರುತ್ತಾರೆ. 4 ನೇ ವಾದಿಯು ನನ್ನ ಮತ್ತು ಇತರ ವಾದಿಗಳ ವಿರುದ್ದ ವಿಭಾಗ ಕೋರಿ ದಾವೆ ಸಲ್ಲಿಸಿರುವ ವಿಚಾರ ನನಗೆ ಗೊತ್ತಿರುತ್ತದೆ. O.S.71/2014 ರಲ್ಲಿ ನಮ್ಮ ಕುಟುಂಬದ ಆಸ್ತಿಗಳು ವಿಭಾಗ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದಲ್ಲಿ 4 ನೇ ವಾದಿಗೆ 3 ಲಕ್ಷ ರೂಪಾಯಿ ಹಣ ನೀಡಿರುತ್ತೇವೆ, ಉಳಿದ ಅಣ್ಣ ತಮ್ಮಂದಿರು ಜಂಟಿಯಾಗಿ ಆಸ್ತಿಯನ್ನು ಪಡೆದುಕೊಂಡಿರುತ್ತೇವೆ. 4 ನೇ ವಾದಿಯು ನನ್ನ ಜೊತೆ ವಾಸವಾಗಿರುವುದಿಲ್ಲ ಎಂದರೆ ಸರಿ. O.S.71/2014 ರಲ್ಲಿ ವಿಭಾಗ ಆಗಿರುವುದರಿಂದ 4 ನೇ ವಾದಿಯು ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ದೇವವೃಂದ ಗ್ರಾಮದ ಸರ್ವೆ ನಂಬರ್ 454 ರಲ್ಲಿ 3 ಎಕರೆ ಮತ್ತು ದೇವವೃಂದ ಗ್ರಾಮದ ಸರ್ವೆ ನಂಬರ್ 301 ರಲ್ಲಿ 3 ಎಕರೆ ಜಮೀನು ಖರೀದಿ ಮಾಡಿರುತ್ತಾರೆ. 1959-60 ರಲ್ಲಿ ಸರ್ವೆ ನಂಬರ್ 293/3 ರಲ್ಲಿ 6 ಎಕರೆ 37 ಗುಂಟೆ ಆಸ್ತಿಯನ್ನು ನನ್ನ ತಂದೆಯು ಖರೀದಿ ಮಾಡಿರುತ್ತಾರೆ. ನನ್ನ ತಂದೆಯು ಸದರಿ ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಅಳತೆ ಮಾಡಿರುವುದಿಲ್ಲ. ನನ್ನ ತಂದೆಯು ಸರ್ವೆ ನಂಬರ್ 293/3 ರಲ್ಲಿ ಖರೀದಿ ಮಾಡಿರುವ 6 ಎಕರೆ 37 ಗುಂಟೆ ಆಸ್ತಿಗೆ ಬೇಲಿ ಮಾಡಿದ್ದರು. ನನ್ನ ತಂದೆಯು ದಿಃ 31.03.2015 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯು ಆಸ್ತಿಯನ್ನು ಸರ್ವೆ ಮಾಡುವಂತೆ ಅರ್ಜಿ ಸಲ್ಲಿಸಿರುವುದಿಲ್ಲ, ಸಾಕ್ಷಿಯು ಮುಂದುವರೆದು ನಾನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಈಗ 58 ವರ್ಷ ವಯಸ್ಸಾಗಿರುತ್ತದೆ. 1 ನೇ ವಾದಿಗೆ ಈಗ 69 ವರ್ಷ ವಯಸ್ಸಾಗಿರುತ್ತದೆ. 1 ನೇ ವಾದಿಯು ನನ್ನ ಮನೆಯಲ್ಲಿ ವಾಸವಾಗಿರುತ್ತಾರೆ. ನನ್ನ ತಂದೆಯು ಮೃತಪಡುವ

ಸಮಯದಲ್ಲಿ ನನ್ನ ತಂದೆಗೆ 86 ವರ್ಷ ವಯಸ್ಸಾಗಿತ್ತು. ನನ್ನ ತಂದೆಯು ಜೀವಂತ ಕಾಲದಲ್ಲಿ ಕೃಷಿ ಮಾಡುತ್ತಿದ್ದರು. ವಾದಿಗಳು ಎಲ್ಲರು ಜೊತೆಗೆ ಕೃಷಿ ಮಾಡುತ್ತಿದ್ದೆವು. ನನ್ನ ತಂದೆಯು ಮೃತಪಡುವವರೆಗೆ ವಾದಿಗಳು ಎಲ್ಲರು ಜೊತೆಗೆ ಕೃಷಿ ಮಾಡುತ್ತಿದ್ದೆವು ಎಂದರೆ ಸರಿ. ದೇವವೃಂದದ ಕೂಡು ರಸ್ತೆಯಲ್ಲಿ ನನಗೆ ಒಂದು ಅಂಗಡಿ ಇರುತ್ತದೆ ಎಂದರೆ ಸರಿ. ಸದರಿ ಅಂಗಡಿಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಅಂಗಡಿಯ ಪರವಾನಿಗೆಯು ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಅಂಗಡಿಯು ನನ್ನ ಸ್ವಂತ ಅಂಗಡಿಯಾಗಿರುತ್ತದೆ. ಸದರಿ ಅಂಗಡಿಯು ಸರ್ವೆ ನಂಬರ್ 293/3 ರಲ್ಲಿ ಇರುತ್ತದೆ. ಸದರಿ ಅಂಗಡಿ ಇರುವ ಜಾಗವನ್ನು ನಾನು ಭೂ ಪರಿವರ್ತನೆ ಮಾಡಿರುವುದಿಲ್ಲ. ಅಗಂಡಿಯ license ಪಡೆಯುವ ಸಮಯದಲ್ಲಿ ಭೂ ಪರಿವರ್ತನೆಯ ಆದೇಶವನ್ನು ಪಂಚಾಯಿತಿಯಲ್ಲಿ ಕೇಳಿರುವುದಿಲ್ಲ. ವಾದ ಪತ್ರದಲ್ಲಿ ಸರ್ವೆ ನಂಬರ್ 293/3 ರಲ್ಲಿ ಅಂಗಡಿ ಇರುವ ವಿಚಾರವನ್ನು ನಾನು ನಮೂದು ಮಾಡಿರುವುದಿಲ್ಲ ಎಂದರೆ ಸರಿ.

7. ನನ್ನ ತಂದೆಯು ಜೀವಂತ ಕಾಲದಲ್ಲಿ ನನ್ನ ತಂದೆ 7 ಎಕರೆ ಜಾಗವನ್ನು ರಾಮೇಗೌಡರಿಗೆ ಮಾರಾಟ ಮಾಡಿರುತ್ತಾರೆ, ಸರ್ವೆ ನಂಬರ್ ನನಗೆ ನೆನಪಿಲ್ಲ. ರಾಮೇಗೌಡರಿಗೆ ನನ್ನ ತಂದೆಯು ಮಾರಾಟ ಮಾಡಿರುವ 7 ಎಕರೆ ಜಮೀನನ್ನು ರಾಮೇಗೌಡರು ಅವರ ಮಗ ಡಿ.ಆರ್. ವಿಜಯ್ ರವರಿಗೆ ವಿಭಾಗ ಮಾಡಿ ನೀಡಿರುತ್ತಾರೆ ಎಂದರೆ ಸರಿ. ಡಿ.ಆರ್. ವಿಜಯ್ ರವರು ಸದರಿ 7 ಎಕರೆ ಜಮೀನನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ. O.S.71/2014 ರಲ್ಲಿ 4 ನೇ ವಾದಿಯು 5 ನೇ ಪ್ರತಿವಾದಿಯ ಮತ್ತು ಅವರ ಪತ್ನಿ ನೀತಾ ಪ್ರದೀಪ್ ಮತ್ತು 5 ನೇ ಪ್ರತಿವಾದಿಯ ಹೆಂಡತಿಯ ತಮ್ಮ ನಿಶ್ಚಿತ್ ರವರ ವಿರುದ್ದ ದಾವೆಯನ್ನು ದಾಖಲು ಮಾಡಿದ್ದರು ಎಂದರೆ ಸರಿ. ನಮ್ಮ ಅಕ್ಕ ಪಕ್ಕದವರು ಯಾವುದೇ ಆಸ್ತಿಯನ್ನು ಮಾರಾಟ ಮಾಡಿದರೆ

ನನ್ನ ಕುಟುಂಬದವರಿಗೆ ದಾವೆ ದಾಖಲು ಮಾಡುವ ಅಭ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯನ್ನು ನೋಡಿರುತ್ತೇನೆ. 1 ನೇ ಪ್ರತಿವಾದಿಯ ಗಂಡನ ಹೆಸರು ಇದ್ದುಕುನ್ನಿ ಆಗಿರುತ್ತದೆ. ಇದ್ದುಕುನ್ನಿ ರವರನ್ನು ನಾನು ನೋಡಿರುತ್ತೇನೆ. 1 ನೇ ಪ್ರತಿವಾದಿಗೆ 3 ಜನ ಗಂಡು ಮಕ್ಕಳು ಇರುತ್ತಾರೆ. ಎಷ್ಟು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಯು ನನ್ನ ಜಾಗವನ್ನು ಒತ್ತುವರಿ ಮಾಡಿದ ಕಾರಣ ನಾನು 5 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ದಾವ ಆಸ್ತಿಯ ಅಕ್ಕ ಪಕ್ಕದಲ್ಲಿ 5 ನೇ ಪ್ರತಿವಾದಿಗೆ ಜಮೀನು ಇರಲಿಲ್ಲ ಎಂದರೆ ಸಾಕ್ಷಿಯು 5 ನೇ ಪ್ರತಿವಾದಿಯು ಜಮೀನನ್ನು ಕೊಂಡುಕೊಂಡ ನಂತರ 5 ನೇ ಪ್ರತಿವಾದಿಗೆ ದಾವ ಆಸ್ತಿಯ ಅಕ್ಕ ಪಕ್ಕ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿಯು 2017 ರಲ್ಲಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ವಾದ ಪತ್ರದಲ್ಲಿ 5 ನೇ ಪ್ರತಿವಾದಿಯು ಯಾವ ವರ್ಷ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ನಾನು ಹೇಳಿರುವುದಿಲ್ಲ. 2017 ರಲ್ಲಿಯೇ 5 ನೇ ಪ್ರತಿವಾದಿಯು ಜಮೀನನ್ನು ಖರೀದಿ ಮಾಡಿರುತ್ತಿದ್ದರೆ ನಾನು ವಾದ ಪತ್ರದಲ್ಲಿ ಖರೀದಿ ಮಾಡಿದ ವಿಚಾರವನ್ನು ನಮೂದು ಮಾಡುತ್ತಿದ್ದೆ ಎಂದರೆ ಸಾಕ್ಷಿಯು ವಾದ ಪತ್ರದಲ್ಲಿ 5 ನೇ ಪ್ರತಿವಾದಿಯು ಖರೀದಿ ಮಾಡಿರುವ ವಿಚಾರವನ್ನು ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 2017 ರಲ್ಲಿ 1 ನೇ ಪ್ರತಿವಾದಿಯಿಂದ 5 ನೇ ಪ್ರತಿವಾದಿಯು ಆಸ್ತಿ ಖರೀದಿ ಮಾಡುತ್ತಿದ್ದರೆ 2022 ರಲ್ಲಿ ನಾನು 5 ನೇ ಪ್ರತಿವಾದಿಯು ದಾವ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ದಾವೆ ಹಾಕುವ ಪ್ರಮೇಯವೇ ಬರುತ್ತಿರಲಿಲ್ಲ ಎಂದರೆ ಸಾಕ್ಷಿಯು ಸರ್ವೆ ಮಾಡಿಸುವಾಗ ವಿಳಂಬವಾಗಿದ್ದು ನಂತರ ನನಗೆ ಒತ್ತುವರಿ ಆಗಿರುವ ವಿಚಾರವು

ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. 1 ರಿಂದ 3 ಮತ್ತು 5 ನೇ ವಾದಿಗಳು ದಾವ ಆಸ್ತಿಯನ್ನು ಸರ್ವೆ ಮಾಡಲು ಅರ್ಜಿಯನ್ನು 01.01.2016 ರಲ್ಲಿ ಸಲ್ಲಿಸಿರುತ್ತೇವೆ. ದಿಃ 20.02.2017 ರಂದು ಸರ್ವೆ ಮಾಡಲು ದೀಪಕ್ ಸರ್ವೆಯರ್ ಬಂದಿರುತ್ತಾರೆ.

8. ಯು.ಎನ್.ಇಸ್ಮಾಯಿಲ್ ಬ್ಯಾರಿ ಎಂದರೆ ಇದ್ದುಕುನ್ನಿ ರವರ ತಮ್ಮನಾಗಿರುತ್ತಾರೆ. ಯು.ಎನ್.ಇಸ್ಮಾಯಿಲ್ ಬ್ಯಾರಿ ರವರಿಗೆ ಜಮೀನು ಇತ್ತು ಅವರ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಯು.ಎನ್.ಇಸ್ಮಾಯಿಲ್ ಬ್ಯಾರಿ ರವರ ವಿರುದ್ಧ ನಾನು ದಾವೆಯನ್ನು ಸಲ್ಲಿಸಿರುವುದಿಲ್ಲ. ನಿ.ಪಿ.13 ನೋಟೀಸಿನಲ್ಲಿ ಯು.ಎನ್.ಇಸ್ಮಾಯಿಲ್ ಬ್ಯಾರಿ ರವರಿಗೆ ಸರ್ವೆ ನೋಟೀಸನ್ನು ನೀಡಿರುತ್ತದೆ ಎಂದರೆ ಸರಿ. ಯು.ಎನ್.ಇಸ್ಮಾಯಿಲ್ ಬ್ಯಾರಿ ರವರು ಮಂಗಳೂರಿನಲ್ಲಿ ಮತ್ತು ದೇವವೃಂದದಲ್ಲಿ ವಾಸವಾಗಿರುತ್ತಾರೆ. ಡಿ.ಎನ್. ಮೋಹನ್ ರವರಿಗೆ ನನ್ನ ಆಸ್ತಿಯ ಅಕ್ಕ ಪಕ್ಕದಲ್ಲಿ ಆಸ್ತಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಊರಿನಲ್ಲಿ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.14 ನೋಟೀಸಿನಲ್ಲಿ ದಾವ ಆಸ್ತಿಯ ಬಾಜುದಾರರು ಡಿ.ಎಸ್. ಮೋಹನ್ ಎಂದು ಇರುತ್ತದೆ ಎಂದರೆ ಸರಿ. ಸರ್ವೆ ಮಾಡುವ ಸಮಯದಲ್ಲಿ ನಾನು ಹಾಜರಿದ್ದೆನು. ನಿ.ಪಿ.15 ರಲ್ಲಿ ಇರುವ ಗ್ರಾಮಸ್ಥರು ಎಂದು ಬರೆದಿರುವ ಕಡೆ ನನ್ನ ಸಹಿ ಇರುತ್ತದೆ, ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು. 5 ನೇ ವಾದಿಯು ವ್ಯವಸಾಯ ಮತ್ತು ಟಿಂಬರ್ ವ್ಯಾಪಾರವನ್ನು ಮಾಡಿಕೊಂಡಿರುತ್ತಾರೆ. ನಿ.ಪಿ.15 ರಲ್ಲಿ ಬಾಜುದಾರರ ಸಹಿ ಎಂಬ ಭಾಗದಲ್ಲಿ ಇರುವ ಸಹಿ ಯಾರದ್ದು ಎಂದು ನನಗೆ ಗೊತ್ತಿಲ್ಲ. ಸರ್ವೆ ಮಾಡುವ ಸಮಯದಲ್ಲಿ ಯು.ಎನ್.ಇಸ್ಮಾಯಿಲ್ ಬ್ಯಾರಿ ರವರ ಹಾಜರಿದ್ದರು. ನಿ.ಪಿ.15 ರಲ್ಲಿ ಯು.ಎನ್.ಇಸ್ಮಾಯಿಲ್ ಬ್ಯಾರಿ ರವರ ಸಹಿ ಇರುವುದಿಲ್ಲ ಎಂದರೆ ಸರಿ. ಸರ್ವೆಯರ್ ಆದ ಉದಯ್ ರವರು ಪ್ರತಿವಾದಿಗಳಿಗೆ ನೋಟೀಸು ನೀಡಿರುವ

ಬಗ್ಗೆ ಕೇಳಿರುತ್ತೇನೆ, ಆಗ ಸರ್ವೆಯರು ಪ್ರತಿವಾದಿಗಳು ನೋಟೀಸು ತೆಗೆದುಕೊಂಡಿರುವುದಿಲ್ಲ ಎಂದು ಹೇಳಿರುತ್ತಾರೆ. ಸರ್ವೆಯರಿಗೆ ಜಮೀನನ್ನು ನಾನೇ ತೋರಿಸಿರುತ್ತೇನೆ. ಸರ್ವೆಯರ್ ರವರಿಗೆ ಯಾವ ಜಮೀನಿನಲ್ಲಿ ಯಾರು ವ್ಯವಸಾಯ ಮಾಡುತ್ತಾರೆ ಎಂದು ಹೇಳಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. 2017 ರಲ್ಲಿಯೇ ನಾನು ಸರ್ವೆ ಸ್ಕೆಚ್ ಅನ್ನು ಪಡೆದುಕೊಂಡಿರುತ್ತೇನೆ. 2017 ರಿಂದ 2022 ರವರೆಗೆ ಸರ್ವೆ ಸ್ಕೆಚ್ ನನ್ನ ಬಳಿ ಇತ್ತು ಎಂದರೆ ಸಾಕ್ಷಿಯು ನಾನು ವಿಳಂಬವಾಗಿ ಕಚೇರಿಯಿಂದ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.19 ರಲ್ಲಿ ಇಸ್ಮಾಯಿಲ್ ರವರು ಒತ್ತುವರಿ ಮಾಡಿರುವ ಜಮೀನನ್ನು ಬಿಡಿಸಿಕೊಡಬೇಕು ಎಂದು ನಾನು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಇಸ್ಮಾಯಿಲ್ ರವರ ವಿರುದ್ದ ನಾನು ಈ ದಾವೆಯಲ್ಲಿ ಪರಿಹಾರ ಕೇಳಿರುವುದಿಲ್ಲ ಎಂದರೆ ಸರಿ.

9. ನಿ.ಪಿ.20 ದಾಖಲೆಯು ನನ್ನ ವಿರುದ್ದ ದಾಖಲಾಗಿರುವ ಪ್ರಥಮ ವರ್ತಮಾನ ವರದಿ ಎಂದರೆ ಸರಿ. ನನ್ನ ವಿರುದ್ದ ದೂರನ್ನು 1 ನೇ ಪ್ರತಿವಾದಿ, 3, 4 ಮತ್ತು 5 ನೇ ಪ್ರತಿವಾದಿಗಳು ದೂರನ್ನು ನೀಡಿರುತ್ತಾರೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದ ಆಸ್ತಿಯ ಸರ್ವೆ ನಂಬರ್ 303 ಆಗಿರುತ್ತದೆ. ನಾನು ಪ್ರತಿವಾದಿಗಳ ವಿರುದ್ದ ಕುಸ್ತಿಗೆ ಹೋಗಿರುತ್ತೇನೆ ಎಂದು ಸುಳ್ಳು ದೂರನ್ನು ನೀಡಿರುತ್ತಾರೆ. ಪೊಲೀಸರು ಸದರಿ ಪ್ರಕರಣದಲ್ಲಿ ನನ್ನನ್ನು ಬಿಟ್ಟು ನನ್ನ ಸಹೋದರರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಿ.ಪಿ.23 ಮತ್ತು ನಿ.ಪಿ.24 ನನ್ನ ತೋಟದ ಜಾಗವಾಗಿರುತ್ತದೆ. ನಿ.ಪಿ.23 ಮತ್ತು ನಿ.ಪಿ.24 ಛಾಯಚಿತ್ರದಲ್ಲಿ ಇರುವ ಜನರು ನಮ್ಮ ತೋಟದ ಬೇಲಿಯನ್ನು ಕೀಳುತ್ತಿರುತ್ತಾರೆ. ನಿ.ಪಿ.23 ಛಾಯಚಿತ್ರದಲ್ಲಿ ಕಾಫಿ ಮೂಟೆ ಇರುತ್ತದೆ ಎಂದರೆ ಸರಿ. ನಿ.ಪಿ.24 ಛಾಯಚಿತ್ರದಲ್ಲಿ ಕಾಫಿ ಕೊಯ್ಯುತ್ತಿದ್ದಾರೆ ಎಂದರೆ ಸರಿ. ನಿಪಿ.24 ಛಾಯಚಿತ್ರದಲ್ಲಿ ನನ್ನ ತೋಟ ಮತ್ತು 5 ನೇ ಪ್ರತಿವಾದಿಯ ತೋಟದ ನಡುವೆ

ಗೆರೆ ಇರುತ್ತದೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ